# ಅರಣ್ಯದ ಮಧ್ಯೆ ರಕ್ಕಸ ರೈಲು!




ಉತ್ತರಾಖಂಡದಲ್ಲಿ ಅಪಘಾತದ ಒಂದು ದೃಶ್ಯ

**ಕೊಡಗು, ಚಾಮರಾಜನಗರ ಕಾಡುಗಳ ಮಧ್ಯೆ ರೈಲು ಮಾರ್ಗ ಏಕೆ ಬೇಕು? ವನ್ಯಜೀವಿಗಳ ಆವಾಸದಲ್ಲಿ ನಾವೇಕೆ ಹಸ್ತಕ್ಷೇಪ ಮಾಡಬೇಕು?**

■ ಗೀತಾ ಎಚ್. ಮೈಸೂರು

ರೈಲ್ವೆ ಮಾರ್ಗಕ್ಕಾಗಿ ಹಳಿಗಳನ್ನು ಹಾಕುವಾಗ ಆಗುವ ಅರಣ್ಯ ನಾಶ, ವನ್ಯಜೀವಿಗಳ ಆವಾಸ ಪಲ್ಲಟ ಮೊದಲಾದುವನ್ನು ಕಡೆಗಣಿಸುವುದು ಎಷ್ಟರಮಟ್ಟಿಗೆ ಸರಿ ಎನ್ನುವ ವಿವೇಚನೆ ಈಗ ಮುಖ್ಯವಾಗಬೇಕಿದೆ.

ಇತ್ತೀಚೆಗೆ ಕೇಂದ್ರ ಸರ್ಕಾರದ ರೈಲ್ವೆ ಬಜೆಟ್ ಮಂಡನೆಯಲ್ಲಿ ಬ್ರಿಟಿಷರ ಆಳ್ವಿಕೆಯ ಮುಂದುವರೆದ ಭಾಗವೋ ಎಂಬಂತೆ ಹೊಸ ರೈಲು ಮಾರ್ಗಗಳನ್ನು ಕಲ್ಪಿಸಲಾಗಿದೆ. ಮೈಸೂರು ಕುಶಾಲನಗರ, ಮೈಸೂರು  ಸತ್ಯಮಂಗಲ, ನಂಜನಗೂಡು ನೀಲಂಬೂರು ಇತ್ಯಾದಿ ಮಾರ್ಗಗಳ ಪ್ರಸ್ತಾವನೆ ಆಗಿದೆ.

ಸೂಕ್ಷ್ಮ ಅರಣ್ಯ ಪ್ರದೇಶಗಳನ್ನು ಹಾದುಹೋಗಲಿರುವ ಈ ರೈಲ್ವೆ ಮಾರ್ಗಗಳನ್ನು ಹಿಂದಿನ ಸರ್ಕಾರಗಳು ಅರಣ್ಯ ರಕ್ಷಣೆಗೆಂದೇ ಕೈಬಿಟ್ಟಿದ್ದವು. ಇದರಿಂದ ಎಷ್ಟು ಹೆಕ್ಟೇರ್ ಅರಣ್ಯ ಪ್ರದೇಶ ಯಾರು ಯಾರ ಪಾಲಾಗಲಿದೆ? ಈಗಾಗಲೇ ರಸ್ತೆ ಮೂಲಕ ಸಂಪರ್ಕಗಳನ್ನು ಹೊಂದಿರುವ ಈ ಪ್ರದೇಶಗಳು ಸಾಕಷ್ಟು ಮುಂದುವರೆದಿವೆ. ಆದರೂ ಇಲ್ಲಿಗೆ ರೈಲ್ವೆ ಸಂಪರ್ಕದ ಅವಶ್ಯಕತೆ ಇದೆಯೆ?ಇದು ಪರಿಸರ ಸಂಬಂಧಿ ಜಿಜ್ಞಾಸೆ.

ಸಂರಕ್ಷಿತ ಅರಣ್ಯಗಳ ಮೂಲಕ ಹಾದು ಹೋಗುವ ಹೆದ್ದಾರಿಗಳಲ್ಲಿ ರಾತ್ರಿ ಸಂಚಾರದಿಂದ ಆಗುತ್ತಿರುವ ವನ್ಯಜೀವಿಗಳ ಹನನವನ್ನು ತಡೆಯುವುದೇ ಈಗ ದುಸ್ತರವಾಗಿದೆ. ಹೀಗಿರುವಾಗ ಯಾವುದೇ ಅಡೆತಡೆಗಳಿಲ್ಲದೆ, ವಿಶೇಷ ನಿಯಮಾವಳಿಗಳುಳ್ಳ ರೈಲ್ವೆ ಸಂಚಾರ ಎಷ್ಟು ಮಾರಕ ಎಂಬ ಸತ್ಯವನ್ನು ಮನಗಾಣಬೇಕಿದೆ. ಒಮ್ಮೆಲೇ ಬೊಬ್ಬಿರಿವ ರೈಲಿನ ಹಾರನ್‌ಗಳಿಂದ ಎಷ್ಟು ವನ್ಯಜೀವಿಗಳು ಕಂಗೆಡುತ್ತವೆಯೋ, ಅವುಗಳ ಸಂತಾನೋತ್ಪತ್ತಿಯ ಮೇಲೆ ಅದೆಂತಹ  ದುಷ್ಪರಿಣಾಮ ಬೀರುತ್ತದೋ... ಇದ್ಯಾವುದರ ಬಗ್ಗೆ ಯಾವುದೇ ಅಧ್ಯಯನ ನಡೆಸದೆ ಮಾನವ ಕೇಂದ್ರಿತ ಅಭಿವೃದ್ಧಿಗಾಗಿ ಇಂಥ ತೀರ್ಮಾನ ಕೈಗೊಳ್ಳುವುದು ಎಷ್ಟು ಸೂಕ್ತ?

ಇಂಟರ್‌ನ್ಯಾಷನಲ್ ಎಲಿಫೆಂಟ್ ಫೌಂಡೇಷನ್ ಸಂಸ್ಥೆಯು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಸಹಯೋಗದೊಂದಿಗೆ ನಡೆಸಿದ ವೈಜ್ಞಾನಿಕ ಸಮೀಕ್ಷಾ ವರದಿಯ ಪ್ರಕಾರ, ಕಳೆದ 40 ವರ್ಷಗಳಲ್ಲಿ (1974 2013) ವಯಸ್ಕ, ಬಾಲ ಹಾಗೂ ಮರಿಯಾನೆಗಳೂ ಸೇರಿದಂತೆ 82 ಆನೆಗಳು ಅತಿವೇಗದಿಂದ, ಅಂದರೆ ಗಂಟೆಗೆ 80 ಕಿ.ಮೀ. ವೇಗದಲ್ಲಿ ಚಲಿಸುವ ರೈಲಿಗೆ ಸಿಕ್ಕಿ ಸತ್ತಿವೆ. ಬ್ರಾಡ್‌ಗೇಜು ನಿರ್ಮಾಣವಾದ ಮೇಲಂತೂ ಈ ಆನೆಗಳ ಸಾವಿನ ಸಂಖ್ಯೆಯು ಹೆಚ್ಚಳವಾಗಿದೆ. ಗುಲ್ಮ ಸಿವೊಕ್, ಸಿವೊಕ್  ಬಗರಕೋಟೆ, ಊಡ್ಲಬಾರಿ ಡಂಡಿಂ, ಮಾಲ್ ಚಾಲ್ಸಾ, ಬನಾರ್ಹತ್, ದಲಗಾಂವ್, ಹಸಿಮಾರ ಮೊದಲಾದ ಸ್ಥಳಗಳಲ್ಲಿನ ರೈಲ್ವೆ ಹಳಿಗಳ ನಡುವೆ ರೈಲಿಗೆ ಸಿಕ್ಕಿ ಪ್ರಾಣ ತೆತ್ತ ಪ್ರಾಣಿಗಳು ಆನೆಗಳಷ್ಟೇ ಅಲ್ಲ, ಕಾಟಿ, ಕಡವೆ ಇತ್ಯಾದಿ